ವಿಶ್ವವಾಣಿ

ಸಂಪಾದಕೀಯ

ನೂತನ ಉದ್ಯಮ ಸ್ಥಾಪನೆ ಸುರಕ್ಷತೆಗೂ ಇರಲಿ ಆದ್ಯತೆ

ರಾಜ್ಯದಲ್ಲಿ ನೂತನವಾಗಿ ಉದ್ಯಮಗಳನ್ನು ಆರಂಭಿಸುವವರಿಗಾಗಿ ಸರಕಾರದಿಂದ ಬಹಳಷ್ಟು ಸಹಕಾರ ದೊರೆಯುತ್ತಿದೆ. ಆದರೆ ನೂತನವಾಗಿ ಆರಂಭಗೊಳ್ಳುವ ಉದ್ಯಮಗಳಲ್ಲಿ ಸುರಕ್ಷತೆಗೆ ಆದ್ಯತೆ ನೀಡ ಬೇಕಿರುವ ಅವಶ್ಯಕತೆಯಿದೆ. ಇದೀಗ ಜಾರಿಗೊಳಿಸಿರುವ ಇಂಡಸ್ಟ್ರಿಯಲ್ ಫೆಸಿಲಿಟೇಷನ್ ಆ್ಯಕ್ಟ್ (ಐಎಫ್ಎ) ಮತ್ತಷ್ಟು ಅನುಕೂಲ ಒದಗಿಸಿದೆ. ಉದ್ದಿಮೆ ಸ್ಥಾಪನೆಗೆ ಅಗತ್ಯವಿರುವ ಸವಲತ್ತು, ಉತ್ತೇಜನ, ಮೂಲ ಸೌಕರ್ಯ ಹಾಗೂ ಅನುಮತಿಯನ್ನು ತ್ವರಿತವಾಗಿ ಒದಗಿಸುವ ನಿಟ್ಟಿನಲ್ಲಿ ಈ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಸರ್ವಾನುಮತ ದ ಅನುಮತಿ ದೊರೆತಿದ್ದು, ಈ ಕಾಯಿದೆ ಜಾರಿಯಿಂದ ಉದ್ಯಮಿಯೊಬ್ಬರು ಅನುಮತಿ ದೊರೆತ ಕೂಡಲೇ ಘಟಕದ ಕಾಮಗಾರಿ ಆರಂಭಿಸಬಹುದಾಗಿದೆ. ಆದರೆ ನೂತನವಾಗಿ ಉದ್ಯಮಗಳನ್ನು ಆರಂಭಿಸುವವರು ಸರಕಾರದ ಮಾರ್ಗಸೂಚಿಗಳ ಹೊರತಾಗಿಯೂ ಸ್ವಯಂಪ್ರೇರಕ ವಾಗಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ. ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಅನುಗುಣವಾಗಿ ಸುರಕ್ಷತಾ ಅಧಿಕಾರಿಗಳ ನೇಮಕವಾಗಬೇಕಿದೆ. ಕೈಗಾರಿಕಾ ಘಟಕಗಳಲ್ಲಿ ಹಾಗೂ ಅವುಗಳ ನಿರ್ಮಾಣ ಕಾರ್ಯದಲ್ಲಿ ಸುರಕ್ಷತಾ ಅಧಿಕಾರಿ ಗಳನ್ನು ಬಳಸಿಕೊಳ್ಳಬೇಕಿದೆ. ಏಕೆಂದರೆ ಇತ್ತೀಚೆಗೆ ವಿಶಾಖ ಪಟ್ಟಣಂನ ಆರ್. ಆರ್.ವೆಂಕಟಾಪುರ ಗ್ರಾಮದ ಎಲ್.ಜಿ. ಪಾಲಿಮರ್ಸ್ ನಲ್ಲಿ ಸಂಭವಿಸಿದ ಅನಿಲದುರಂತ, ಜೆ.ಎನ್.ಫಾರ್ಮಸಿಟಿ ಅನಿಲ ದುರಂತ, ಮಹಾರಾಷ್ಟ್ರದ ರಾಯ್ ಗಡ ಜಿಲ್ಲೆಯ ರಾಸಾಯನಿಕ ಕಂಪನಿಯಲ್ಲಿ ಸಂಭವಿಸಿದ ಸ್ಫೋಟ ಹಾಗೂ ಬೆಂಗಳೂರಿನ ಹೊಸಗುಡ್ಡದಹಳ್ಳಿಯ ರಾಸಾಯನಿಕ ಕಂಪನಿಯಲ್ಲಿ ಸಂಭವಿಸಿದ ಅವಘಡಗಳು ಉದ್ಯಮಗಳ ಸ್ಥಾಪನೆಗಳ ಜತೆಗೆ ಸುರಕ್ಷತೆಯ ಮಹತ್ವವನ್ನು ಸಾರುತ್ತಿದೆ. ರಾಜ್ಯದಲ್ಲಿ ಹಲವು ನೂತನ ಉದ್ಯಮಗಳ ಆರಂಭದ ಜತೆಗೆ 6ಕಡೆ ಕೈಗಾರಿಕೆ ಟೌನ್‌ಶಿಪ್‌ಗಳನ್ನೂ ನಿರ್ಮಿಸಲಾಗುತ್ತಿದೆ. ಉದ್ಯಮಗಳ ಸ್ಥಾಪನೆಗೆ ವೇಗ ದೊರೆತಿರುವ ಇಂದಿನ ದಿನಗಳಲ್ಲಿ ಉದ್ಯಮಿಗಳು ಸ್ವಯಂಪ್ರೇರಿತವಾಗಿ ಸುರಕ್ಷತೆಯ ವಿಧಾನಗಳನ್ನು ಅಳವಡಿಕೊಳ್ಳಬೇಕಿದೆ.

ಸೊಂಪಾದಕೀಯ

ಲಂಚ ಅಂದರೆ ಲಂಚ್ ಇದ್ದಂಗೆ

ಭ್ರಷ್ಟಾಚಾರದ ವಿಷಯದಲ್ಲಿ ಭರತವು ಏಷ್ಯಾ ಖಂಡದಲ್ಲೇ ಮೊದಲ ಸ್ಥಾನದಲ್ಲಿದೆಯಂತೆ. ಟ್ರಾನ್ಸಪರೆನ್ಸಿ ಇಂಟರ್‌ನ್ಯಾಶನಲ್ ಎಂಬ ಸಂಸ್ಥೆಯ ವರದಿಯಲ್ಲಿ ಈ ವಿಷಯ ತಿಳಿಸಲಾಗಿದೆ. ಹೀಗೆ ಹೇಳಿದರೆ ಅದಕ್ಕೆ,' ಅಯ್ಯೋ, ಇದು ಗೊತ್ತಿರುವಂಥದ್ದೇ. ಇದರಲ್ಲಿ ಹೊಸತನವೇನಿದೆ. ಇದಕ್ಕೆ ವರದಿ ಬೇರೆ ಬೇಕಾ ?' ಎಂದು ಯಾರಾದರೂ ಕೇಳಿಯಾರು. ಹೌದಲ್ವಾ. ಅಂಗೈ ಹುಣ್ಣಿಗೆ ಕನ್ನಡಿ ಏಕೆ ಎಂಬ ಗಾದೆ ನೆನಪಾದೀತು. ಇದಕ್ಕೆ ಮತ್ತೆ, ಹಣ್ಣು ಬೇಕೆಂದರೆ ಹಣ ಕೊಡಲೇಬೇಕಲ್ವೆ. ಇಲ್ಲಾಂದ್ರೆ ಎಲ್ಲಾ ಮಣ್ಣು ಅನ್ನಬಹುದು. ಇದು ಎಲ್ಲರ ಅನುಭವದ ಮಾತು. ಏಷ್ಯಾದಲ್ಲಿ ಏಕೆ ಇಡೀ ಜಗತ್ತನ್ನೇ ತೆಗೆದುಕೊಂಡರೂ ಈ ವಿಚಾರದಲ್ಲಿ ಭಾರತವೇ ಫಸ್ಟ್ ಆಗಬಹುದು. ಜಗತ್ತಿನಲ್ಲಿ ಯಾವ ಯಾವ ವಿಚಾರದಲ್ಲಿ ಸರ್ವೆ ನಡೆಯುತ್ತವೆ. ಸಂತೋಷದ ಜೀವನ ನಡೆಸುವುದು ಇರಬಹುದು, ಮಾಲಿನ್ಯ ಇರಬಹುದು, ಅನಕ್ಷರತೆ, ಅಪೌಷ್ಟಿಕತೆ - ಹೀಗೆ ಎಲ್ಲದರಲ್ಲೂ ನಾವು ಕೊನೆಯಲ್ಲೇ ಇರುತ್ತೇವೆ. ಇದರಲ್ಲಾದರೂ ಮೊದಲ ಸ್ಥಾನದಲ್ಲಿದ್ದೇವಲ್ಲ ಬಿಡಿ. ನಮ್ಮಲ್ಲಿ ಲಂಚಾವತಾರದ ಬಗ್ಗೆ ಸಿನಿಮಾ, ನಾಟಕ ಎಲ್ಲಾ ಬಂದಿವೆ. ಇದು ನಮ್ಮ ಜೀವನದ ಅವಿಭಾಜ್ಯ ಅಂಗ. ಲಂಚವು ಲಂಚ್ ಇದ್ದಹಾಗೆ. ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಯಾರೂ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಭ್ರಷ್ಟಾಚಾರವು ನಮ್ಮ ಒಂದು ಆಚಾರದಂತಾಗಿದೆ. ಕೊಡಕೊಳ್ಳುವುದು ನಮ್ಮ ಸಂಪ್ರದಾಯ. ನಾವು ಯಾವುದನ್ನೂ ಹಾಗೆಯೇ ತೆಗೆದುಕೊಳ್ಳುವುದಿಲ್ಲ. ದಕ್ಷಿಣೆ ಕೊಟ್ಟೇ ಏನನ್ನಾದರೂ ತೆಗೆದುಕೊಳ್ಳುವು ದಲ್ಲವೆ. ಅದನ್ನು ತೆಗೆದುಕೊಳ್ಳುವವವರಿಗೂ ಚೆನ್ನಾಗಿ ಗೊತ್ತು. ದಕ್ಷಿಣೆ ಎಷ್ಟೋ ಅಷ್ಟೇ ಪ್ರದಕ್ಷಿಣೆ ಎಂಬುದು ಓಪನ್ ಸೀಕ್ರೆಟ್. ಭ್ರಷ್ಟಾಚಾರ, ಲಂಚ ಇವೆಲ್ಲ ಪದಗಳು ನಮಗೆ ಅರ್ಥವಾಗುವುದಿಲ್ಲ. ಕೈ ಬೆಚ್ಚಗೆ ಮಾಡುವುದು ಅಂದರೆ ಥಟ್ಟನೆ ಗೊತ್ತಾಗುತ್ತದೆ. ಹಾಗೆಂದು ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ನಾವು ಮಾಡದ ಉಪಾಯವಿಲ್ಲ, ಕೈಗೊಳ್ಳದ ಉಪಾಯವಿಲ್ಲ. ಏನು ಮಾಡಿದ್ದೇವೆ ಒಸಿ ಹೇಳಿ ಎನ್ನುವಿರಾ? ಕೇಂದ್ರದಲ್ಲಿ ಲೋಕಪಾಲ ಎಂಬ ಸಂಸ್ಥೆ ಇದೆ. ರಾಜ್ಯದಲ್ಲಿ ಲೋಕಾಯುಕ್ತ ಇದೆ. ಭ್ರಷ್ಟಾಚಾರ ನಿಗ್ರಹ ದಳ ಇದೆ. ಒಂದೇ ಎರಡೇ. ಇವರು ಆಗಾಗ ಭ್ರಷ್ಟರ ಮನೆ ಮೇಲೆ ದಾಳಿ ಮಾಡುತ್ತಾರೆ. ಅಷ್ಟಾಗಿಯೂ ಹೀಗೇಕೆ ಎಂದು ಕೇಳದಿರಿ. ಲೋಕಪಾಲ ಎಂಬುದು ಒಂದು ರೀತಿ ಲೋಪಪಾಲ ಇದ್ದ ಹಾಗೆ. ಇನ್ನು ನಮ್ಮ ರಾಜ್ಯದ ಲೋಕಾಯುಕ್ತ ಅದೇನೊ ಹಲ್ಲು ಕಿತ್ತ ಹಾವು ಅಂತ ಏನೋ ಹೇಳ್ತಾರಲ್ಲ, ಹಾಗಿದೆ ಎಂಬುದು ಹಲವರ ಅಂಬೋಣ. ಏಕೆಂದರೆ ಇವರು ದಾಳಿ ಮಾಡುವ ಬಗ್ಗೆ ದಾಳಿ ಮಾಡಿಸಿಕೊಳ್ಳುವವರಿಗೆ ಅನೇಕ ಸಾರಿ ಟಿಪ್ (ಸುಳಿವು) ಮಾಡಿರುತ್ತಾರಂತೆ. ಇದಕ್ಕಾಗಿ ಟಿಪ್ಸ್ ಕೊಟ್ಟಿರಬಹುದು. ಟಿಪ್ಸ್ ಅಂದರೆ ಲಂಚವೇ ಎಂದು ಕೇಳಬೇಡಿ. ಹಾಗೆಂದು ಇಡೀ ವ್ಯವಸ್ಥೆ ಹಾಗಿದೆ ಅಂತ ಅಲ್ಲ. ಆದರೆ ಕೈನ ಎಲ್ಲ ಬೆರಳುಗಳು ಒಂದೇ ಥರ ಇರುವುದಿಲ್ಲ ಅಲ್ಲವೇ. ಆ ಥರ. ಅದಕ್ಕಾಗಿಯೇ ಹೇಳಿದ್ದು ಭ್ರಷ್ಟಾಚಾರ ಪಾರ್ಥೇನಿಯಂ ಥರ. ಎಷ್ಟು ತೆಗೆದರೂ ಹೋಗುವುದೇ ಇಲ್ಲ. ಇನ್ನಷ್ಟು ಹುಲುಸಾಗಿ ಬೆಳೆಯುತ್ತದೆ. ಪಾಪ ಟ್ರಾನ್ಸಪರೆನ್ಸಿಯವರಿಗೆ ಇದೆಲ್ಲ ಹೇಗೆ ಗೊತ್ತಾಗಬೇಕು.

ಸಂಪಾದಕರ ಸದ್ಯಶೋಧನೆ

ಒಂದು ಸಂಬಂಧ, ಎರಡು ಪತ್ರಗಳು!

ಜವಾಹರಲಾಲ್ ನೆಹರು ಮತ್ತು ಸರ್ದಾರ್ ವಲ್ಲಭಭಾಯ್ ಪಟೇಲ್ ಸಂಬಂಧದ ಬಗ್ಗೆ ಸಾಕಷ್ಟು ಕತೆಗಳು, ಉಪಕಥೆಗಳು, ಕಟ್ಟುಕಥೆಗಳು, ಅಡಾಪಡಾ ಕಥೆಗಳು ಇವೆ. ಪಟೇಲರೇ ಮೊದಲ ಪ್ರಧಾನಿಯಾಗಬೇಕಿತ್ತು, ಗಾಂಧೀಜಿಗೆ ನೆಹರು ಬಗ್ಗೆ ಹೆಚ್ಚಿನ ಒಲವಿದ್ದುದರಿಂದ, ಅವರು ಪ್ರಧಾನಿಯಾದರು, ನೆಹರು ಮತ್ತು ಪಟೇಲ್ ಮುಖಾಮುಖಿ ಕೊಟ್ಟು ಮಾತಾಡುತ್ತಿರಲಿಲ್ಲ, ಅವರಿಬ್ಬರ ಸಂಬಂಧ ಹಳಸಿರುವುದು ಗಾಂಧೀಜೀಗೆ ಗೊತ್ತಿತ್ತು, ನೆಹರು ಅವರಿಗಿಂತ ಪಟೇಲರು ಹದಿನಾಲ್ಕು ವರ್ಷ ಹಿರಿಯರಾಗಿದ್ದರಿಂದ ನ್ಯಾಯಯುತವಾಗಿ, ಪ್ರಧಾನಿ ಸ್ಥಾನ ಅವರಿಗೇ ಬರಬೇಕಿತ್ತು... ಹೀಗೆ ಅನೇಕ ವಾದಗಳಿವೆ. ಅವರಿಬ್ಬರ ಸಂಬಂಧ ಹೇಗಿತ್ತೋ, ಅವರಿಬ್ಬರಿಗೇ ಗೊತ್ತು. ಆದರೆ ಅವರಿಬ್ಬರ ನಡುವಿನ ಸಂಬಂಧ ಹೇಗಿತ್ತು ಎಂಬುದಕ್ಕೆ, ಉಭಯ ನಾಯಕರ ಮಧ್ಯೆ, ಎರಡು ದಿನಗಳ ಅವಧಿಯಲ್ಲಿ ನಡೆದ ಪತ್ರ ವ್ಯವಹಾರವೇ ಸಾಕ್ಷಿ. 1948ರ ಜನವರಿ 30ರಂದು ಗಾಂಧೀಜಿ ಹತ್ಯೆಯಾಯಿತು. ಗಾಂಧಿ ಹತ್ಯೆಯಾಗುವ ಹತ್ತು ನಿಮಿಷ ಮೊದಲು ಪಟೇಲರು ಬಾಪು ಜತೆಗಿದ್ದರು. ಆ ದುರ್ಘಟನೆಯ ನಾಲ್ಕು ದಿನಗಳ ನಂತರ ಅಂದರೆ ಫೆಬ್ರವರಿ ಮೂರರಂದು ನೆಹರು ಪಟೇಲರಿಗೆ ಪತ್ರ ಒಂದು ಬರೆದರು - 'ಬಾಪು ಸಾವಿನಿಂದಾಗಿ ಎಲ್ಲವೂ ಬದಲಾಗಿವೆ. ಇನ್ನು ಮುಂದೆ ನಾವು ಭಿನ್ನವಾದ, ಕಠಿಣತಮವಾದ ಜಗತ್ತನ್ನು ಎದುರಿಸಬೇಕಿದೆ. ನನ್ನ ಮತ್ತು ನಿಮ್ಮ ಸಂಬಂಧದ ಬಗ್ಗೆ ಕೇಳಿಬರುತ್ತಿರುವ ಪಿಸುಮಾತು ಮತ್ತು ವದಂತಿಗಳಿಂದ ನಾನು ಬಹಳ ನೊಂದಿದ್ದೇನೆ. ನಮ್ಮಿಬ್ಬರ ಮಧ್ಯೆ ಅದ್ಯಾವ ಭಿನ್ನಾಭಿಪ್ರಾಯವಿದೆಯೋ ಗೊತ್ತಿಲ್ಲ, ಆದರೆ ಬೇಕೆಂದೇ ಅದನ್ನು ದೊಡ್ಡದಾಗಿ ಮಾಡುವ ಹುನ್ನಾರಗಳು ನಡೆಯುತ್ತಲೇ ಇವೆ. ಈ ರೀತಿಯ ಕಿಡಿಗೇಡಿ ಕೃತ್ಯಗಳಿಗೆ ನಾವಿಬ್ಬರೂ ಪೂರ್ಣ ವಿರಾಮ ಹಾಕಲೇಬೇಕಿದೆ. ಬಾಪು ನಿಧನ ನಂತರದ ಈ ಬಿಕ್ಕಟ್ಟಿನ ಸಮಯದಲ್ಲಿ, ನಾವಿಬ್ಬರೂ ಜತೆಯಾಗಿ ಪರಸ್ಪರ ಸ್ನೇಹಿತರು ಮತ್ತು ಸಹೋದ್ಯೋಗಿಗಳು ಎಂಬುದನ್ನು ಹೊರ ಜಗತ್ತಿಗೆ ಗಟ್ಟಿಯಾಗಿ ಹೇಳುವುದು ನನ್ನ ಜವಾಬ್ದಾರಿ ಮತ್ತು ನಿಮ್ಮ ಜವಾಬ್ದಾರಿಯೂ ಹೌದು ಎಂದು ಭಾವಿಸಿದ್ದೇನೆ. ಕೇವಲ ತೋರಿಕೆಗಾಗಿ ಅಲ್ಲ, ಇಬ್ಬರೂ ಪರಸ್ಪರರಿಗೆ ಸಂಪೂರ್ಣ ನಿಷ್ಠರಾಗಿ, ವಿಶ್ವಾಸದಿಂದ ಇದನ್ನು ಮಾಡಲೇಬೇಕಿದೆ. ನನ್ನ ಕಡೆಯಿಂದ ಅದನ್ನು ಪೂರ್ಣ ಮನಸ್ಸಿನಿಂದ ಮಾಡುತ್ತೇನೆ ಎಂಬುದನ್ನು ನಿಮಗೆ ಭರವಸೆ ನೀಡುತ್ತೇನೆ.' ಇದಾಗಿ ಎರಡು ದಿನಗಳ ಬಳಿಕ ಅಂದರೆ ಫೆಬ್ರವರಿ ಐದರಂದು ಪಟೇಲರು ನೆಹರು ಅವರಿಗೆ ಆ ಪತ್ರಕ್ಕೆ ಉತ್ತರ ಬರೆದರು - 'ನಿಮ್ಮ ಪತ್ರದಲ್ಲಿರುವ ಆತ್ಮೀಯತೆ ಮತ್ತು ಬೆಚ್ಚನೆಯ ಮಾತುಗಳು ನನ್ನಲ್ಲಿ ಅತೀವ ಸಮಾಧಾನ ಮತ್ತು ಸಂತೋಷವನ್ನುಂಟು ಮಾಡಿದೆ. ನೀವು ಮುಕ್ತ ಮನಸ್ಸಿನಿಂದ ಹಂಚಿಕೊಂಡ ಭಾವನೆಗಳನ್ನು ನಾನೂ ಸಹ ಹೃದಯಪೂರ್ವಕವಾಗಿ ಪ್ರತಿಯಾಗಿ ವ್ಯಕ್ತಪಡಿಸಲು ಬಯಸುತ್ತೇನೆ. ನಾವಿಬ್ಬರೂ ಒಂದೇ ಉದ್ದೇಶ ಈಡೇರಿಕೆಗೆ ಜೀವನಪೂರ್ತಿ ಜತೆಗಿದ್ದವರು, ಹೋರಾಡಿದವರು. ನಮ್ಮ ದೇಶದ ಬಗ್ಗೆ ನಮಗಿರುವ ಪರಮ ಹಿತಾಸಕ್ತಿ ಮತ್ತು ಬಹಳ ವರ್ಷಗಳಿಂದ ನಮ್ಮಿಬ್ಬರ ನಡುವಿರುವ ಪರಸ್ಪರ ಪ್ರೀತಿ, ಆತ್ಮೀಯತೆ, ಈ ಎಲ್ಲಾ ಗೊಂದಲಗಳನ್ನು ನಿವಾರಿಸುತ್ತದೆ ಎಂದು ನಾನು ಭಾವಿಸಿದ್ದೇನೆ.' ಈ ಎರಡು ಪತ್ರಗಳನ್ನು ಓದಿದರೆ ಅವರ ಸಂಬಂಧ ಹೇಗಿತ್ತು ಎಂಬ ಬಗ್ಗೆ ಸಾಕಷ್ಟು ಹೊಳಹುಗಳು ಸಿಗುತ್ತವೆ. ಅಷ್ಟೇ ಅಲ್ಲ, ನೆಹರು-ಪಟೇಲರ ನಡುವೆ ಭಿನ್ನಾಭಿಪ್ರಾಯ ಮೂಡಿಸುವುದರಲ್ಲಿ ಸಂತಸ ಕಾಣುತ್ತಿದ್ದವರಿಗೆ ಉತ್ತರವೂ ಇದೆ. ಇಬ್ಬರೂ ನಾಯಕರು ತಮ್ಮ ನಡುವಿನ ಈ ಖಾಸಗಿ ಪತ್ರಗಳನ್ನು ಉದ್ದೇಶಪೂರ್ವಕ ವಾಗಿಯೇ ಬಹಿರಂಗ ಮಾಡಿ ತಮ್ಮ ಸಂಬಂಧ ಏನು ಎಂಬುದನ್ನು ಹೇಳಿದ್ದರು. ಇತ್ತೀಚೆಗೆ ಈ ಎರಡು ಪತ್ರಗಳು ಸಿಕ್ಕವು.

‘ಮಹಾತ್ಮಗಾಂಧಿ’ಯ ಹೆಸರಿನಲ್ಲಿ ಸಂವಿಧಾನ ‘ಅಂಗೀಕಾರ’ವಾಗಲಿಲ್ಲವಲ್ಲ!

ವೀಕೆಂಡ್ ವಿಥ್ ಮೋಹನ್

ಮೋಹನ್ ವಿಶ್ವ
camohanbn@gmail.com

ಸಂವಿಧಾನವೆಂಬುದು ಪ್ರತಿಯೊಂದು ದೇಶದ ಆಂತರಿಕ ನಿಯಮಾವಳಿಗಳು ಇದ್ದಹಾಗೆ, ಒಂದು ಕುಟುಂಬವನ್ನು ನಡೆಸಲು ಹೇಗೆ ಒಂದು ಭದ್ರ ಬುನಾಧಿಯ ನಿಯಮಾವಳಿಗಳಿರುತ್ತವೆಯೋ ಒಂದು ದೇಶವನ್ನು ನಡೆಸಲೂ ಸಹ ಭದ್ರ ನಿಯಮಾವಳಿಯ ಅಗತ್ಯವಿರುತ್ತದೆ. ಈ ನಿಯಮಾವಳಿಯ ಅಡಿಯಲ್ಲಿಯೇ ಇಡೀ ದೇಶವು ನಡೆಯ ಬೇಕಾಗುತ್ತದೆ. ದೇಶದ ಪ್ರತಿಯೊಂದು ಕಾನೂನುಗಳು ಈ ನಿಯಮಾವಳಿಯನ್ನು ಮೀರುವಂತಿಲ್ಲ, ಯಾವುದಾದರೊಂದು ನೂತನ ಕಾನೂನ ನ್ನು ಜಾರಿಗೆ ತರಬೇಕಾದರೆ ಆ ದೇಶದ ಸಂವಿಧಾನ ದಡಿಯಲ್ಲಿಯೇ ಜಾರಿಗೆ ತರಬೇಕು, ಪ್ರಸ್ತುತವಿರುವ ಕಾನೂನಿಗೆ ತಿದ್ದುಪಡಿ ತರಬೇಕೆಂದರೂ ಅಷ್ಟೇ ಸಂವಿಧಾನದಡಿಯಲ್ಲಿಯೇ ಜಾರಿಗೆ ತರಬೇಕು. ಸಂವಿಧಾನಕ್ಕೆ ವಿರುದ್ಧವಿರುವ ಯಾವ ಕಾನೂನು ಸಹ ಜಾರಿಗೆ ಬರುವಂತಿಲ್ಲ, ಅದನ್ನೂ ಮೀರಿ ನೂತನ ಕಾನೂನುಗಳನ್ನೋ ಅಥವಾ ನೂತನ ತಿದ್ದುಪಡಿಯನ್ನೋ ತರಬೇಕೆಂದರೆ ಸಂವಿಧಾನವನ್ನೇ ತಿದ್ದುಪಡಿಮಾಡಬೇಕು. ಹಾಗಂತ ಸಂವಿಧಾನವನ್ನು ತಿದ್ದುಪಡಿಮಾಡುವುದು ಅಷ್ಟು ಸುಲಭದ ಕೆಲಸವಲ್ಲ, ಒಂದು ದೇಶದ ಸಂವಿಧಾನವನ್ನು ತಿದ್ದುಪಡಿ ಮಾಡುವುದೆಂದರೆ ಅಲ್ಲಿನ ಮೂಲ ನಿಯಮಾವಳಿಯನ್ನು ಬದಲಾವಣೆ ಮಾಡಿದ ಹಾಗೆ. ಕೇವಲ ಅಗತ್ಯ ಬಿದ್ದರೆ ಮಾತ್ರ ಸಂವಿಧಾನದ ತಿದ್ದುಪಡಿ ಮಾಡಬೇಕೆ ಹೊರತು ಮನಸ್ಸಿಗೆ ತೋಚಿದ ಹಾಗೆಲ್ಲ ಮಾಡಲಾಗುವುದಿಲ್ಲ. ನಿಮಗೆ ಒಂದು ಚಿಕ್ಕ ಉದಾಹರಣೆಯನ್ನು ನೀಡಬೇಕೆಂದರೆ ಬಹು ನಿರೀಕ್ಷಿತ ಜಿ.ಎಸ್.ಟಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ಮೊದಲು 2016ರಲ್ಲಿ ಸಂವಿಧಾನದ ತಿದ್ದುಪಡಿಯನ್ನು ಮಾಡಲಾಯಿತು. ಭಾರತದ ಸಂವಿಧಾನವು ರಾಜ್ಯದೊಳಗಿನ ಸರಕು ವಸ್ತುಗಳ ಮಾರಾಟದ ಮೇಲಿನ ತೆರಿಗೆ ವಿಧಿಸುವ ಹಕ್ಕನ್ನು ಆಯಾ ರಾಜ್ಯಗಳಿಗೆ ನೀಡಿತ್ತು, ಸೇವಾವಲಯದ ಮೇಲೆ ವಿಧಿಸುವ ತೆರಿಗೆಯ ಹಕ್ಕನ್ನು ಕೇಂದ್ರ ಸರಕಾರಕ್ಕೆ ನೀಡಿತ್ತು. ಜಿ.ಎಸ್.ಟಿ ಅಡಿಯಲ್ಲಿ ಸರಕು ವಸ್ತುಗಳು ಹಾಗೂ ಸೇವಾವಲಯವೆಂಬ ವ್ಯತ್ಯಾಸವಿಲ್ಲದ ಕಾರಣ ದೇಶದಾದ್ಯಂತ ಒಂದೇ ತೆರಿಗೆ ಪದ್ಧತಿಯನ್ನು ಜಾರಿಗೆ ತರಬೇಕಿತ್ತು. ಸಂವಿಧಾನದ ಪ್ರಕಾರ ಸೇವಾ ವಲಯದ ತೆರಿಗೆ ವಿಧಿಸುವ ಹಕ್ಕನ್ನು ಕೇಂದ್ರಕ್ಕೆ ಮಾತ್ರ ನೀಡಿದ್ದರಿಂದ, ನೂತನ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ರಾಜ್ಯ ಸರಕಾರಗಳಿಗೂ ತೆರಿಗೆ ವಿಧಿಸುವ ಹಕ್ಕನ್ನು ನೀಡಬೇಕಿತ್ತು, ಜೊತೆಗೆ ರಾಜ್ಯದೊಳಗಿನ ಸರಕುವಸ್ತುಗಳ ಮಾರಾಟದ ಮೇಲಿನ ತೆರಿಗೆಯ ಹಕ್ಕನ್ನು ಕೇಂದ್ರ ಸರಕಾರಕ್ಕೆ ನೀಡಬೇಕಿತ್ತು. ಈ ಎರಡನ್ನೂ ಜಾರಿಗೆ ತರಬೇಕಿದ್ದರೆ ಸಂವಿಧಾನದ ತಿದ್ದುಪಡಿಯ ಅಗತ್ಯವಿತ್ತು, ಇಲ್ಲವಾದಲ್ಲಿ ಜಿಎಸ್‌ಟಿ ಕಾಯ್ದೆ ಜಾರಿಗೆ ತರಲು ಸಾಧ್ಯವಿರಲಿಲ್ಲ. ಇದರ ಪರಿಣಾಮವಾಗಿ ಮೊದಲು ಸಂವಿಧಾನವನ್ನು ತಿದ್ದುಪಡಿ ಮಾಡಿ ನಂತರ ಜಿ.ಎಸ್.ಟಿ ಕಾಯ್ದೆಯನ್ನು ಜಾರಿಗೆ ತರಲಾಯಿತು.

ದೇಶದ ಒಳಿತಿಗಾಗಿ ಅಥವಾ ಬಹುದೊಡ್ಡ ಸುಧಾರಣೆಯನ್ನು ಮಾಡಲು ಸಂವಿಧಾನವನ್ನು ತಿದ್ದುಪಡಿ ಮಾಡುವುದರಲ್ಲಿ ತಪ್ಪಿಲ್ಲ, ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದಮೇಲೆ ಮಾಡಿರುವ ತಿದ್ದುಪಡಿಯೆಲ್ಲವೂ ಸಹ ದೇಶದ ಒಳಿತಿಗಾಗಿಯೇ ಹೊರತು ಸ್ವಾರ್ಥ ರಾಜಕಾರಣಕ್ಕಾಗಿ ಅಲ್ಲ. ಭಾರತದ ಸಂವಿಧಾನವು ಅಂಗೀಕಾರವಾದ ನಂತರ ಒಟ್ಟಾರೆ 104 ಬಾರಿ ತಿದ್ದುಪಡಿ ಯಾಗಿದೆ. ಅಟಲ್ ಬಿಹಾರಿ ವಾಜಪೇಯಿ ಹಾಗೂ ನರೇಂದ್ರ ಮೋದಿಯವರ ಅಧಿಕಾರಾವಧಿಯಲ್ಲಿ ಇದುವರೆಗೂ 20 ತಿದ್ದುಪಡಿಯಾಗಿವೆ. ಉಳಿದ ತಿದ್ದುಪಡಿಗಳೆಲ್ಲವೂ ಕಾಂಗ್ರೆಸ್ ಪೋಷಿತ ಸರಕಾರದ ಅವಧಿಯಲ್ಲಿಯೇ ಆಗಿವೆ. 1949ರಲ್ಲಿ ಮೊಟ್ಟಮೊದಲ ಬಾರಿಗೆ ಸಂವಿಧಾನದ ಕರಡು ಪ್ರತಿಯು ಚರ್ಚೆಗೆ ಬಂದಾಗ ಹಲವು ಬದಲಾವಣೆಗಳನ್ನು ಸೂಚಿಸಲಾಯಿತು, ಈ ಬದಲಾವಣೆಯಲ್ಲಿ ಜಾತ್ಯತೀತ ಹಾಗೂ ಸಮಾಜವಾದವೆಂಬ ಪದಗಳನ್ನು ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲು ಹಲವು ಮುಖಂಡರು ಒತ್ತಾಯಿಸಿದರು. ಆದರೆ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಸ್ವತಃ ಇದಕ್ಕೆ ಒಪ್ಪಲಿಲ್ಲ, ಅಂಬೇಡ್ಕರ್ ಅವರಿಗೆ ಸಂವಿಧಾನವನ್ನು ಕಠಿಣವಾಗಿ ರಚಿಸಲು ಇಷ್ಟವಿರಲಿಲ್ಲ. ಅವರ ದೂರದೃಷ್ಟಿ ಎಷ್ಟಿತ್ತೆಂದರೆ ಸಮಯಕ್ಕೆ ತಕ್ಕಂತೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಗಳು ಬದಲಾಗುತ್ತಿರುತ್ತವೆ, ಆಯಾ ಕಾಲಕ್ಕೆ ತಕ್ಕಂತೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನು ದೇಶದ ಜನರು ನಿರ್ಧರಿಸಬೇಕೇ ಹೊರತು ಸಂವಿಧಾನದ ಮುನ್ನುಡಿಯಲ್ಲಿ ಸೇರಿಸಿದರೆ ಅದಕ್ಕೆ ಅರ್ಥವಿರುವುದಿಲ್ಲವೆಂಬುದನ್ನು ಹೇಳಿದ್ದರು, ಇದಕ್ಕೆ ಸ್ವತಃ ನೆಹರು ಸಹ ಸಹಮತ ನೀಡಿದ್ದರೆಂದು ಹೇಳಲಾಗುತ್ತದೆ. ಮತ್ತೊಂದು ಸ್ವಾರಸ್ಯಕರ ಸಂಗತಿಯೊಂದನ್ನು ಹಂಚಿಕೊಳ್ಳುವುದಾದರೆ ಕೆಲವು ಮುಖಂಡರು ಸಂವಿಧಾನದ ಮುನ್ನುಡಿಯಲ್ಲಿ ‘ದೇವರ ಹೆಸರಿನಲ್ಲಿ’ ಅಥವಾ ‘ಮಹಾತ್ಮಾ ಗಾಂಧೀಜಿಯವರ ಹೆಸರಿನಲ್ಲಿ’ ಎಂಬ ಅಂಶವನ್ನು ಅಂಗೀಕಾರ ಮಾಡಿಕೊಳ್ಳಲು ಸೂಚಿಸಿದ್ದರು, ಆದರೆ 68:41ರ ಬೆಂಬಲದ ಅನುಪಾತದಲ್ಲಿ ಈ ಸಲಹೆ ಕೂಡ ಅಂಗೀಕಾರವಾಗಲಿಲ್ಲ. ಇಡೀ ದೇಶವೇ ಮಹಾತ್ಮನೆಂದು ಒಪ್ಪಿಕೊಳ್ಳುವ ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಸಂವಿಧಾನದ ಅಂಗೀಕಾರಕ್ಕೆ ಸರ್ವಾನುಮತದಿಂದ ಒಪ್ಪಿಗೆ ಸಿಗುತ್ತದೆಯೆಂದುಕೊಂಡವರಿಗೆ ಆಶ್ಚರ್ಯ ಕಾದಿತ್ತು. 68 ಮಂದಿ ಈ ಪ್ರಸ್ತಾವನೆಯ ವಿರುದ್ಧ ಮತ ಹಾಕಿದ್ದರೆಂದರೆ ಮಹಾತ್ಮಾ ಗಾಂಧಿಯವರ ವಿರುದ್ಧದ ಅಲೆ ಎಷ್ಟಿತ್ತೆಂದು ನೀವೇ ಆಲೋಚಿಸಿ ನೋಡಿ.

ಭಾರತದ ಸಂವಿಧಾನದ ಇತಿಹಾಸದಲ್ಲಿ ಅತ್ಯಂತ ಕರಾಳವಾದ ಯುಗವೆಂದರೆ 1976ರಲ್ಲಿ ಅಂದಿನ ಕಾಂಗ್ರೆಸ್ಸಿನ ಪ್ರಧಾನಿ ಇಂದಿರಾ ಗಾಂಧಿ ಮಾಡಿದ ತಿದ್ದುಪಡಿಗಳು. ಒಂದು ದೇಶದ ಅಸ್ತಿತ್ವವು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಮೇಲೆ ನಿಂತಿರುತ್ತದೆ. ಸರಕಾರವು ಮಾಡಿದ ಕಾನೂನುಗಳನ್ನು ಕಾರ್ಯಾಂಗವು ಜಾರಿಗೊಳಿಸಿದರೆ, ಸರಕಾರ ಹಾಗೂ ಕಾರ್ಯಾಂಗ ಗಳ ನಡುವೆ ಕಾನೂನಿನ ತೊಡಕುಗಳು ಬಂದಾಗ ನ್ಯಾಯಾಂಗವು ತೀರ್ಮಾನಿಸುತ್ತದೆ, ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಆದರೆ ಅಲ್ಲಿ ಆದದ್ದೇ ಬೇರೆ, ಇಂದಿರಾ ಗಾಂಧಿಯವರ ಚುನಾವಣೆಯಲ್ಲಿ ನಡೆದ ಅಕ್ರಮದ ತನಿಖೆಯನ್ನು ಪರಿಶೀಲಿಸಿದ ಅಂದಿನ ನ್ಯಾಯಪೀಠವು ಅವರ ಚುನಾವಣೆಯಲ್ಲಿ ನಡೆದಿದ್ದ ಅಕ್ರಮವನ್ನು ಎತ್ತಿ ಹಿಡಿದು ತೀರ್ಪು ನೀಡಿತ್ತು. ಇದರಿಂದ ವಿಚಲಿತಗೊಂಡಂಥ ಸರ್ವಾಧಿಕಾರಿ ಇಂದಿರಾ ಗಾಂಧಿ ಸಂವಿಧಾನವನ್ನೇ ತಿದ್ದುಪಡಿ ಮಾಡಿ ನ್ಯಾಯಾಲಯದ ವ್ಯಾಪ್ತಿ ಯನ್ನೇ ಕುಂಠಿತಗೊಳಿಸಿದ್ದರು. ಈ ತಿದ್ದುಪಡಿಯ ಪ್ರಭಾವ ಹೇಗಿತ್ತೆಂದರೆ, ಸಾರ್ವಭೌಮ ಭಾರತದ ಬಹುಮುಖ್ಯ ಅಂಗ ವಾಗಿದ್ದ ನ್ಯಾಯಾಂಗ ವ್ಯವಸ್ಥೆಯನ್ನೇ ಬುಡಮೇಲಾಗಿಸಿತ್ತು. ಇದನ್ನು ಗಮನಿಸಿದ ಸರ್ವೋಚ್ಚ ನ್ಯಾಯಾಲಯ ಇಂದಿರಾ ಗಾಂಧಿ ಸರಕಾರವು ಮಾಡಿದ ಈ ತಿದ್ದುಪಡಿಯು ದೇಶದ ಮೂಲ ಅಸ್ತಿತ್ವವನ್ನೇ ಅಲುಗಾಡಿಸಿದೆಯೆಂದು ಹೇಳಿತ್ತು. ಇಷ್ಟಾದರೂ ಇಂದಿರಾ ಗಾಂಧಿಯವರಿಗೆ ಬುದ್ಧಿ ಬರಲಿಲ್ಲ, ದೇಶದಾದ್ಯಂತ ಪ್ರತಿಭಟನೆಗಳು ನಡೆದವು. ಸರಕಾರದ ವಿರುದ್ಧ ಯಾರು ಪ್ರತಿಭಟನೆಯನ್ನು ಮಾಡುತ್ತಾರೋ ಅವರನ್ನು ಜೈಲಿಗೆ ಹಾಕುವ ಸರ್ವಾಧಿಕಾರವನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಸರಕಾರಕ್ಕೆ ನೀಡಲಾಯಿತು. ಸಿಕ್ಕ ಸಿಕ್ಕ ಪ್ರತಿಭಟನಾಕಾರರನ್ನು ಜೈಲಿಗಟ್ಟಲಾಯಿತು. ಮಾಧ್ಯಮದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು, ಪತ್ರಿಕೆಯೊಂದು ಇಂದಿರಾ ಸರಕಾರದ ವಿರುದ್ಧ ಬರೆದರೆ ಸಾಕು ಅದರ ಸಂಪಾದಕನನ್ನು ಜೈಲಿಗೆ ಹಾಕಲಾಗುತ್ತಿತ್ತು. ಸುಬ್ರಮಣ್ಯಂ ಸ್ವಾಮಿಯಂಥ ತರುಣ ಯುವಕರೂ (1976ರಲ್ಲಿ) ಸಹ ಜೈಲಿಗೆ ಹೋಗಬೇಕಾಯಿತು. ದೆಹಲಿಯ ಶ್ರೀ ರಾಮ್ ಕಾಲೇಜಿನಲ್ಲಿ ಓದುತ್ತಿದ್ದ ‘ಅರುಣ್ ಜೇಟ್ಲಿ’ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರ ಪರಿಣಾಮವಾಗಿ ಜೈಲಿಗೆ ಹೋಗಬೇಕಾಯಿತು. ಇಂತಹ ತಿದ್ದುಪಡಿಯನ್ನು ಪ್ರಶ್ನಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುವಷ್ಟರಲ್ಲಿ ಇಂದಿರಾ ಗಾಂಧಿ ತನ್ನ ಅಧಿಕಾರವನ್ನು ಬಳಸಿ ನೇಮಿಸಿದ್ದ ನ್ಯಾಯಮೂರ್ತಿ ತಿದ್ದುಪಡಿ ಯನ್ನು ಎತ್ತಿ ಹಿಡಿಯುವ ಮೂಲಕ, ಸರಕಾರದ ವಿರುದ್ಧ ಮಾತನಾಡಿದವರ ಬಂಧನವು ಮತ್ತಷ್ಟು ತೀವ್ರವಾಯಿತು. ಮಾತು ಮಾತಿಗೂ ಸಂವಿಧಾನದ ತಿದ್ದುಪಡಿಯ ವಿಚಾರವಾಗಿ ನರೇಂದ್ರ ಮೋದಿಯವರನ್ನು ಟೀಕಿಸುವ ಕಾಂಗ್ರೆಸ್ಸಿಗರಿಗೆ ತಮ್ಮ ಅಧಿನಾಯಕಿ ತನ್ನ ಸ್ವಾರ್ಥಕ್ಕಾಗಿ ಮಾಡಿದ ಸಂವಿಧಾನದ ತಿದ್ದುಪಡಿಯ ನೆನಪಾಗುವುದಿಲ್ಲ, ‘ವಾಕ್ ಸ್ವಾತಂತ್ರ್ಯ’ವನ್ನು ಕಸಿದುಕೊಂಡು ತನಗಿಷ್ಟಬಂದಂತೆ ಸರ್ವಾಧಿಕಾರ ನಡೆಸಿದ ಕೀರ್ತಿ ‘ಇಂದಿರಾ ಗಾಂಧಿ’ಗೆ ಸಲ್ಲಬೇಕು.

ತನ್ನ ಸ್ವಾರ್ಥಕ್ಕೋಸ್ಕರ ಸಂವಿಧಾನವನ್ನು ಅಡ್ಡ ದಿಡ್ಡಿಯಾಗಿ ತಿದ್ದುಪಡಿ ಮಾಡಿದಂಥ ಕಾಂಗ್ರೆಸ್ಸಿನ ನಾಯಕಿ ಇಂದಿರಾ ಗಾಂಧಿಯ ಹಿಂಬಾಲಕರು, ಇಂದು ಮಾತು ಮಾತಿಗೂ ಜನರ ತಲೆಯಲ್ಲಿ ಸಂವಿಧಾನದ ವಿಚಾರವಾಗಿ ಸುಳ್ಳುಗಳನ್ನು ತುಂಬುವ ಪ್ರಯತ್ನ ಮಾಡುತ್ತಿರುತ್ತಾರೆ. ‘ಅನಂತ ಕುಮಾರ್ ಹೆಗ್ಡೆ ಸಂವಿಧಾನವನ್ನು ತಿದ್ದುಪಡಿ ಮಾಡಲು ನಾವು ಸಿದ್ದ’ನೆಂದು ಒಂದೇ ಒಂದು ಹೇಳಿಕೆ ನೀಡಿದ್ದರ ಪರಿಣಾಮವಾಗಿ ಸಂಸತ್ತಿನಲ್ಲಿ ಕ್ಷಮೆಯಾಚಿಸು ವಂತಾಯಿತು, ಆದರೆ ಅದೇ ಜಾಗದಲ್ಲಿ ತನ್ನ ಸ್ವಾರ್ಥ ರಾಜಕೀಯ ಜೀವನಕ್ಕಾಗಿ ಇಂದಿರಾ ಗಾಂಧಿ ಮಾಡಿದ ಅನಾಹುತಗಳಿಗೆ ಕ್ಷಮೆ ಕೇಳುವ ನೈತಿಕತೆ ಕಾಂಗ್ರೆಸ್ಸಿನವರಿಗಿದೆಯೇ? ಸಂವಿಧಾನದ ದಿವಸದಂದು ಸಂವಿಧಾನದ ಮುನ್ನುಡಿಯನ್ನು ಓದುವ ಮೂಲಕ ತಾವು ಸಂವಿಧಾನಕ್ಕೆ ಬದ್ಧನೆಂದು ಪುಂಗಿ ಊದುವ ಕಾಂಗ್ರೆಸ್ಸಿಗರಿಗೆ, ಸಂವಿಧಾನದ ಮುನ್ನುಡಿಯಲ್ಲಿನ ಅಂಶಗಳಿಗೆ ಇಂದಿರಾ ಗಾಂಧಿ ಮಾಡಿರುವ ಅವಮಾನದ ಅರಿವಿದೆಯೇ? ಸಂವಿಧಾನದ ಮುನ್ನುಡಿಯಲ್ಲಿರುವ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆತಂದಂಥ ಇಂದಿರಾ ಗಾಂಧಿಯ ತುರ್ತು ಪರಿಸ್ಥಿತಿಯನ್ನು ಹೇಗೆ ತಾನೇ ಮರೆಯಲು ಸಾಧ್ಯ? ‘ಸಮಾಜವಾದ’ ‘ಜಾತ್ಯತೀತತೆ’ಯ ಅಂಶಗಳನ್ನು ಬಳಸಿಕೊಂಡು ದಶಕಗಳಿಂದ ಮತ ಬ್ಯಾಂಕ್ ರಾಜಕೀಯ ಮಾಡಿದ್ದು ಇದೇ ಕಾಂಗ್ರೆಸ್ ಹಾಗೂ ಕಮ್ಯುನಿಷ್ಟರು. ‘ಜಾತ್ಯತೀತತೆ’ಯೆಂದರೆ ಜಾತಿಯನ್ನೂ ಮೀರಿದಂಥ ಆಚರಣೆ, ಜಾತಿಯನ್ನೂ ಮೀರಿದಂಥ ಆಡಳಿತ, ಜಾತಿಯನ್ನೂ ಮೀರಿದಂಥ ನ್ಯಾಯ. ಆದರೆ ಇವರು ಆಡಳಿತ ನಡೆಸಿದ್ದು ಮಾತ್ರ ಇದರ ತದ್ವಿರುದ್ಧ. ಇವರ ಪ್ರಕಾರ ‘ಜಾತ್ಯತೀತ’ರೆಂದರೆ ಕೇವಲ ಮುಸಲ್ಮಾನರು ಹಾಗೂ ದಲಿತರು. ಜಾತ್ಯತೀತೆಯ ಸೋಗಿನಲ್ಲಿ ಇವರಿಬ್ಬರನ್ನೂ ಪ್ರತಿಯೊಂದು ಚುನಾವಣೆಯಲ್ಲೂ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಂಡರು. ಜಾತ್ಯತೀತತೆಯಡಿಯಲ್ಲಿರುವ ಹಿಂದೂಗಳು, ಸಿಕ್ಕರು, ಜೈನರು, ಪಾರ್ಸಿಗಳು ಇವರಿಗೆ ನೆನಪಾಗಲೇ ಇಲ್ಲ, ಮುಸಲ್ಮಾನರು ಹಾಗೂ ದಲಿತರನ್ನು ಚುನಾವಣೆಗಾಗಿ ಬಳಸಿಕೊಂಡರೆ ಹೊರತು ಅವರ ಉದ್ಧಾರಕ್ಕಂತೂ ಶ್ರಮಿಸಲಿಲ್ಲ. ಇಂದಿಗೂ ಇವರಿಬ್ಬರನ್ನು ಸಮಾಜದ ಹಿಂದುಳಿದ ವರ್ಗದಡಿಯಲ್ಲಿಯೇ ಸೇರಿಸಿ ರಾಜಕಾರಣ ಮಾಡುತ್ತಾರೆ.

ಸಂವಿಧಾನ ಪೀಠಿಕೆಯ ಮತ್ತೊಂದು ಪ್ರಮುಖ ಅಂಶವೆಂದರೆ ‘ಅಭಿವ್ಯಕ್ತಿ’ ಸ್ವಾತಂತ್ರ್ಯ, ಇಂದಿರಾ ಗಾಂಧಿ ತಮ್ಮ ಸರಕಾರದ ವಿರುದ್ಧ ಕೂಗಿದವರನ್ನು ಜೈಲಿಗಟ್ಟುವ ಮೂಲಕ ‘ಅಭಿವ್ಯಕ್ತಿ’ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದ್ದರು. ಕೆಲ ದಿನಗಳ ಹಿಂದೆ ಮಹಾರಾಷ್ಟ್ರದಲ್ಲಿ ‘ಅರ್ನಬ್ ಗೋಸ್ವಾಮಿ’ಯನ್ನು ಜೈಲಿಗೆ ಕಳುಹಿಸುವ ಮೂಲಕ ಕಾಂಗ್ರೆಸ್ ಬೆಂಬಲಿತ ‘ಶಿವಸೇನಾ’ ಸರಕಾರ ಮತ್ತದನ್ನೇ ಮಾಡಿತು. ಭಾರತದ ವಿರುದ್ಧ ನೀಡುವ ದೇಶದ್ರೋಹಿ ಹೇಳಿಕೆಗಳನ್ನು ಹತ್ತಿಕ್ಕಲು ‘ಅಭಿವ್ಯಕ್ತಿ’ ಸ್ವಾತಂತ್ರ್ಯವನ್ನು ಬಳಸುವಂತಿಲ್ಲ, ಅಪ್ಪಿ ತಪ್ಪಿ ಬಳಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಮ್ಮದೇ ಸಂವಿಧಾನ ಹೇಳಿದೆ.

ಭಾರತದ ವಿರುದ್ಧ ಹೇಳಿಕೆ ನೀಡುವುದೆಂದರೆ ‘ಸಾರ್ವಭೌಮತ್ವ’ಕ್ಕೆ ಧಕ್ಕೆಯುಂಟು ಮಾಡಿದ ಹಾಗೆ, ಹಾಗಾಗಿ ಅಂತಹವರ ವಿರುದ್ಧ ಯಾವುದೇ ಕ್ರಮ ಬೇಕಾದರೂ ಕೈಗೊಳ್ಳಬಹುದಾಗಿದೆ. ‘ಪೌರತ್ವ ತಿದ್ದುಪಡಿ ಕಾಯ್ದೆ’ಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟ್ ಬೆಂಬಲಿತ ಕೆಲವರು ಭಾರತದ ವಿರುದ್ಧ ಹಲವಾರು ಹೇಳಿಕೆಗಳನ್ನು ನೀಡಿದ್ದರು, ಅಂತಹ ಸಂದರ್ಭದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಯಿತು, ಇದರಿಂದ ಅವರ ‘ಅಭಿವ್ಯಕ್ತಿ’ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆ ಬಂದಿರಲಿಲ್ಲ, ಅತ್ತ ಕಾಶ್ಮೀರದಲ್ಲಿ ಸಂವಿಧಾನದ ಪರಿಚ್ಛೇಯ 370ರ ರದ್ಧತಿಯ ಸಂದರ್ಭದಲ್ಲಿ ಕೆಲವು ‘ನಾಯಕರನ್ನು’ ಗೃಹ ಬಂಧನದಲ್ಲಿರಿಸ ಲಾಯಿತು, ಅಲ್ಲಿಯೂ ಅಷ್ಟೇ ಭಾರತದ ಅವಿಭಾಜ್ಯ ಅಂಗವಾಗಿರುವ ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವು ಇತರೆ ರಾಜ್ಯಗಳ ವಿರುದ್ಧವಾಗಿತ್ತು. ಭಾರತದ ಇತರ ರಾಜ್ಯಗಳೆಲ್ಲವೂ ಪರಿಚ್ಛೇಯ 370ರ ರದ್ದತಿಗೆ ಬೆಂಬಲಿಸಿದ ಮೇಲೆ ‘ಗೃಹ ಬಂಧನ’ವನ್ನು ‘ಅಭಿವ್ಯಕ್ತಿ’ ಸ್ವಾತಂತ್ರ್ಯಕ್ಕೆ ತಂದಂಥ ಧಕ್ಕೆ ಎನ್ನಲು ಸಾಧ್ಯವಿಲ್ಲ. ‘ಭಾರತವನ್ನು ತುಂಡು ತುಂಡಾಗಿ ಮಾಡಬೇಕು’ ಎಂದವನ ಪರವಾಗಿ ‘ಅಭಿವ್ಯಕ್ತಿ’ಸ್ವಾತಂತ್ರ್ಯದ ಕೂಗು ಕೇಳಿಬಂತು, ಆದರೆ ಅವನ ದೇಶದ್ರೋಹಿ ಹೇಳಿಕೆಯಿಂದ ಭಾರತದ ‘ಸಾರ್ವಭೌಮತ್ವ’ಕ್ಕೆ ಧಕ್ಕೆಯುಂಟಾಗಿತ್ತು. ಭಾರತದ ಈಶಾನ್ಯ ಭಾಗವನ್ನು ಸಂಪರ್ಕಿಸುವ ‘ಚಿಕನ್ ನೆಕ್’ ಭಾಗವನ್ನು ನಿರ್ಬಂದಿಸಬೇಕೆಂಬ ಹೇಳಿಕೆಯನ್ನು ನೀಡಿದಾಗಲೂ ಅಷ್ಟೇ ಸಂವಿಧಾನದ ಪೀಠಿಕೆಯ ‘ಸಾರ್ವಭೌಮತ್ವ’ಕ್ಕೆ ಧಕ್ಕೆಯಾಗಿತ್ತು, ಇಂತಹವರನ್ನು ಬಂಧಿಸಿ ಜೈಲಿಗೆ ಕಳುಹಿಸುವುದರ ಮೂಲಕ ಭಾರತ ಸಂವಿಧಾನದಕ್ಕೆ ಗೌರವ ನೀಡಲಾಯಿತು. ಇಂದಿರಾ ಗಾಂಧಿಯ ತುರ್ತು ಪರಿಸ್ಥಿತಿಯ ಸಮಯದಲ್ಲಿ ಪ್ರತಿಭಟನೆ ಮಾಡಿದವರ್ಯಾರೂ ಸಹ ಭಾರತದ ‘ಸಾರ್ವಭೌಮತ್ವ’ಕ್ಕೆ ಧಕ್ಕೆ ತಂದಿರಲಿಲ್ಲ, ಆದಾಗ್ಯೂ ಅವರನ್ನೆಲ್ಲ ಬಂಧಿಸಿ ಜೈಲಿಗಟ್ಟಲಾಗಿತ್ತೆಂಬ ಸತ್ಯವನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು.

ಸಂವಿಧಾನ ಪೀಠಿಕೆಯ ಮತ್ತೊಂದು ಪ್ರಮುಖ ಅಂಶವೆಂದರೆ ‘ಧರ್ಮ’ ಹಾಗೂ ‘ಉಪಾಸನ’ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯವೆಂದರೆ ಭಾರತದಲ್ಲಿ ಯಾರು ಯಾವ ಧರ್ಮವನ್ನು ಬೇಕಾದರೂ ಪಾಲಿಸಬಹುದಾಗಿದೆ. ಇದರರ್ಥ ಧರ್ಮ ಪಾಲನೆಯೆಂಬುದು ಅವರವರ ಮನಸ್ಸಿನಿಂದ ಬರಬೇಕೆ ಹೊರತು ಮತ್ಯಾರೋ ಹೇರುವುದರಿಂದ ಬರಬಾರದು. ಒಂದು ಧರ್ಮದ ಆಚರಣೆಯು ಮತ್ತೊಂದು ಧರ್ಮಕ್ಕೆ ಅಡ್ಡಿಯನ್ನುಂಟು ಮಾಡಿದರೆ ಮತ್ತೊಂದು ಧರ್ಮಕ್ಕೆ ‘ಸಾಮಾಜಿಕ’ನ್ಯಾಯವೇ ಸಿಕ್ಕಂತಾಗು ವುದಿಲ್ಲ. ಸಂವಿಧಾನದ ಪೀಠಿಕೆಯನ್ವಯ ‘ಸಾಮಾಜಿಕ’ ನ್ಯಾಯವನ್ನು ಭಾರತದ ಪ್ರತಿಯೊಬ್ಬ ಪ್ರಜೆಗೂ ನೀಡಲೇಬೇಕಿದೆ, ಹಾಗಾಗಿ ‘ಧರ್ಮ’ಆಚರಣೆಯ ಸ್ವಾತಂತ್ರ್ಯದ ನೆಪದಲ್ಲಿ ಸಾಮಾಜಿಕ ನ್ಯಾಯವನ್ನು ಮರೆಯಬಾರದು. ಸಂವಿಧಾನದ ಅಡಿಯಲ್ಲಿ ಮತ್ತೊಂದು ಧರ್ಮಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರಕಾರಗಳ ಆದ್ಯ ಕರ್ತವ್ಯ, ಆದರೆ ಅದುದ್ದಾದರೂ ಏನು? ಪಶ್ಚಿಮ ಬಂಗಾಳದಲ್ಲಿ ‘ಈದ್ ಮಿಲಾದ್’ ‘ಮೊಹರಂ’ ನಂದು ನಡೆಯುವ ಮೆರವಣಿಗೆಗಳಿಗೆ ಸರಕಾರದ ಅನುಮತಿಯು ಅನಾಯಾಸವಾಗಿ ಸಿಗುತ್ತದೆ, ಆದರೆ ‘ದುರ್ಗಾಷ್ಟಮಿ’ಯಾ ಮೆರವಣಿಗೆಗೆ ಬೇಕಿರುವ ಅನುಮತಿಯೂ ಸಿಗುವುದಿಲ್ಲ. ‘ಗಣೇಶ ಚತುರ್ಥಿ’ಯ ಸಂದರ್ಭದಲ್ಲಿ ಸಂಜೆ ಹತ್ತು ಗಂಟೆಯ ನಂತರ ವಾದ್ಯಗೋಷ್ಠಿಯನ್ನು ನಡೆಸುವಂತಿಲ್ಲ, ಮೆರವಣಿಗೆಯನ್ನು ನಡೆಸುವಂತಿಲ್ಲ. ದೀಪಾವಳಿ ಹಬ್ಬದಂದು ಪಟಾಕಿ ಹೊಡೆಯುವಂತಿಲ್ಲ. ‘ಧರ್ಮ’ ಸ್ವಾತಂತ್ರ್ಯ ಕೇವಲ ಒಂದು ಧರ್ಮಕ್ಕೆ ಮಾತ್ರ ಮೀಸಲೇ? ಆಯುಧ ಪೂಜೆಯಂದು ಸಂವಿಧಾನವನ್ನಿಟ್ಟು ಪೂಜೆ ಮಾಡುವ ಶಾಸಕಿ ‘ಸೌಮ್ಯ ರೆಡ್ಡಿ’ಗೆ ತಾನು ಕೇವಲ ಒಂದು ಧರ್ಮದ ಆಚರಣೆಗಳಿಗೆ ಗಂಟುಬಿದ್ದದ್ದು ಸಂವಿಧಾನದ ಪೀಠಿಕೆಯ ವಿರುದ್ಧವೆಂದು ತಿಳಿದಿಲ್ಲವೇ? ಹಾಗಾದರೆ ಇವರಿಗೆಲ್ಲ ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲವಲ್ಲ. ಏಸುವಿನ ಚಿತ್ರದ ಪಕ್ಕದಲ್ಲಿ ಗಣೇಶನ ಚಿತ್ರವಿಟ್ಟು ಪೂಜೆ ಮಾಡುವ ಮೂಲಕ, ಬಲವಂತವಾಗಿ ‘ಧರ್ಮ’ವನ್ನು ಜನರ ತಲೆಯಲ್ಲಿ ತುರುಕುವ ಕೆಲಸ ಮಾಡಿದರಲ್ಲ, ಅದೂ ಸಹ ಸಂವಿಧಾನದ ‘ಧರ್ಮ’ ಸ್ವಾತಂತ್ರ್ಯದ ವಿರುದ್ಧವಲ್ಲದೆ ಮತ್ತೇನು? ‘ಧರ್ಮ’ ಸ್ವಾತಂತ್ರ್ಯವಿದೆ ಎಂದಾಕ್ಷಣ ಬಲವಂತವಾಗಿ ಮತಾಂತರ ಮಾಡುವುದಲ್ಲ ಅಥವಾ ತಲೆಯನ್ನು ಹಾಳು ಮಾಡಿ ಇತರೆ ಧರ್ಮದ ಅಮಲನ್ನು ತಲೆಯಲ್ಲಿ ತುಂಬುವುದಲ್ಲ, ಇದರಿಂದ ಇತರ ‘ಧರ್ಮ’ಕ್ಕೆ ಧಕ್ಕೆ ಬರುವುದರಿಂದ, ಮತಾಂತರವೂ ಸಹ ಸಂವಿಧಾನದ ಮೂಲ ‘ಪೀಠಿಕೆ’ಯ ವಿರುದ್ಧವಾಗಿದೆ.

ಸಂವಿಧಾನದ ‘ಪೀಠಿಕೆಯನ್ನು’ ಕೇವಲ ಓದಿದರೆ ಸಾಲದು. ಅದರ ಹಾದಿಯಲ್ಲಿ ಭಾರತವು ನಡೆಯುತ್ತಿದೆಯೇ ಎಂಬ ಗಂಭೀರ ಸಂಗತಿಯನ್ನು ಚರ್ಚಿಸಬೇಕಿದೆ. ಹಲವಾರು ವರ್ಷಗಳ ಅಧ್ಯಯನದ ಫಲದಿಂದ ನಮ್ಮ ಸಂವಿಧಾನವನ್ನು ರಚಿಸಲಾಗಿದೆ, ಅಷ್ಟೊಂದು ಕಷ್ಟ ಪಟ್ಟು ರಚಿಸಿ, ಅಂಗೀಕರಿಸಿದ ಭಾರತದ ಸಂವಿಧಾನವನ್ನು ಬಳಸಿಕೊಂಡು ಹೀನಾಯ ರಾಜಕೀಯ ಮಾಡಿದ ಕೀರ್ತಿ ಕಾಂಗ್ರೆಸ್ಸಿಗೆ ಸಲ್ಲಬೇಕು. ಹಿಂದೆಯೂ ಮಾಡಿದಲ್ಲದೆ ಈಗಲೂ ಮಾಡುತ್ತಲೇ ಇದೆ. ಮಾತೆತ್ತಿದರೆ ಸಂವಿಧಾನವನ್ನು ಅಡ್ಡ ತಂದು ಜನರ ಮನಸ್ಥಿತಿಯೊಂದಿಗೆ ಆಟವಾಡುವ ಪಕ್ಷವಿದು. ಸಂವಿಧಾನದ ಪೀಠಿಕೆಯಲ್ಲಿನ ಒಂದೊಂದು ಅಂಶವನ್ನು ವಿವರವಾಗಿ ಅಧ್ಯಯನ ಮಾಡುತ್ತಾ ಹೋದರೆ, ಆ ಅಂಶಗಳನ್ನು ಬಳಸಿಕೊಂಡು ರಾಜಕೀಯ ಮಾಡುವ ಸಾವಿರಾರು ಘಟನೆಗಳು ಸಿಗುತ್ತವೆ. ಇವರ ಜೊತೆಗೆ ಕೈ ಜೋಡಿಸಿದ ಕಮ್ಯುನಿಸ್ಟರಂತೂ ಹೇಗಾದರೂ ಮಾಡಿ ‘ಹಿಟ್ಲರ್’ನ ರೀತಿಯಲ್ಲಿ ಭಾರತದಲ್ಲಿ ಆಡಳಿತ ನಡೆಸಬೇಕೆಂಬ ಆಸೆಯನ್ನಿಟ್ಟುಕೊಂಡು ಹಲವು ಬಾರಿ ‘ಸಂವಿಧಾನ’ದ ಮೂಲ ಪೀಠಿಕೆಗಳ ವಿರುದ್ಧ ನಡೆದು ಕೊಳ್ಳುತ್ತಿರುತ್ತಾರೆ. ಒಳಗಿದ್ದುಕೊಂಡೇ ದೇಶವನ್ನು ತುಂಡು ತುಂಡು ಮಾಡುವ ಹುನ್ನಾರ ಕಮ್ಯುನಿಸ್ಟರದ್ದು, ಮೊದಮೊದಲು ರಷ್ಯಾದಿಂದ ಇವರಿಗೆ ಹಣದ ಸರಬರಾಜಾಗು ತ್ತಿತ್ತು, ನಂತರ ‘ಅಮೆರಿಕಾ’ದ ಗುಪ್ತಚರ ಸಂಸ್ಥೆ ಹಣವನ್ನು ನೀಡುತ್ತಿತ್ತು, ನಂತರ ‘ಚೀನಾ’ದೇಶವು ಇವರಿಗೆ ಹಣ ನೀಡಲು ಶುರು ಮಾಡಿತ್ತು, ಈಗ ಚೀನಾ ಹಾಗೂ ಪಾಕಿಸ್ತಾನದಿಂದಲೂ ಇವರಿಗೆ ಹಣ ಸಂದಾಯವಾಗುತ್ತದೆ. ವಿಪರ್ಯಾಸ ನೋಡಿ ಇಂತಹವರ ಬಾಯಲ್ಲಿ ನಾವುಗಳು ‘ಸಂವಿಧಾನ’ ಪೀಠಿಕೆಯ ಪಠನೆ ಕೇಳಬೇಕು, ಇದೆಲ್ಲುದರ ಒಟ್ಟಾರೆ ‘ಸಾರಾಂಶ’ವೆಂದರೆ, ‘ಸಂವಿಧಾನ’ದ ಪೀಠಿಕೆಯಲ್ಲಿನ ಅಂಶಗಳನ್ನು ಬಳಸಿಕೊಂಡು ಕಾಂಗ್ರೆಸ್ ಹಾಗೂ ಕಮ್ಯುನಿಷ್ಟರು ಅದರ ವಿರುದ್ಧ ಹೆಚ್ಚಿನ ರಾಜಕೀಯ ಮಾಡಿದರೆ ಹೊರತು ಅದರಲ್ಲಿನ ಅಂಶಗಳನ್ನು ಜಾರಿಗೆ ತರುವಲ್ಲಿ ಶ್ರಮ ವಹಿಸಲಿಲ್ಲ.

ಆಯುರ್ವೇದ ‘ಥೀಸಿಸ್’ನ ಹಡಗಿನಂತಾಗುತ್ತಿದೆಯೇ?

ಅಭಿವ್ಯಕ್ತಿ

ಡಾ.ದಯಾನಂದ ಲಿಂಗೇಗೌಡ
dayanandal@gmail.com

ತತ್ವ ಶಾಸ್ತ್ರಗಳಲ್ಲಿ ಒಂದು ಪ್ರಸಿದ್ಧವಾದ ಹಡಗಿನ ಜಿಜ್ಞಾಸೆ ಇದೆ . ಅದಕ್ಕೆ ‘ಥೀಸಿಸ್’ ಹಡಗು ಎನ್ನುತ್ತಾರೆ. ಈ ಜಿಜ್ಞಾಸೆಯಲ್ಲಿ ಹಡಗಿನ ಭಾಗಗಳು ಹಳತಾಯಿತು ಎನ್ನುವ ಕಾರಣಕ್ಕೊ ಅಥವಾ ಕೆಲಸ ಮಾಡುತ್ತಿಲ್ಲ ಎನ್ನುವ ಕಾರಣಕ್ಕೋ, ಬಿಡಿಭಾಗಗಳನ್ನು ಒಂದೊಂದೇ ಬದಲಾಯಿಸುತ್ತಾರೆ. ಹಲವು ಬಾರಿ ಬಿಡಿಭಾಗಗಳ ಬದಲಾವಣೆಗಳ ನಂತರ, ಇಡೀ ಹಡಗು ಹೊಸ ಬಿಡಿ ಭಾಗಗಳಿಂದ ಮಾಡಲ್ಪಡುತ್ತದೆ. ಆಗ ನೀವು ಹಡಗನ್ನು ಹಳೆಯ ಹಡಗಿನ ಹೆಸರಿಂದ ಗುರುತಿಸುತ್ತಿರೋ ಅಥವಾ ಇದು ಹೊಸ ಹಡಗು ಎನ್ನುತ್ತೀರೋ ಅಥವಾ ಹಳೆ ಹಡಗಿನ ತದ್ರೂಪು ಎನ್ನುತ್ತೀರೋ ಎಂಬುದೇ ಜಿಜ್ಞಾಸೆ. ಏಕೆಂದರೆ ಹಡಗಿನಲ್ಲಿ ಉಳಿದಿರುವುದು ಹಳೆಯ ಹಡಗಿನ ರೂಪ ಅಷ್ಟೇ. ಅದರಲ್ಲಿರುವ ಪ್ರತಿ ಬಿಡಿಭಾಗಗಳು ಕೂಡ ಬೇರೆ ಯಾವುದೋ ಹಡಗಿನಿಂದ ತಂದ ಭಾಗವಾಗಿರುತ್ತದೆ. ಆ ಕಾರಣದಿಂದ ಈ ಹಡಗಿಗೆ ಒಂದು ‘ಐಡೆಂಟಿಟಿ ಕ್ರೈಸಿಸ್’ ಹುಟ್ಟಿಕೊಳ್ಳುತ್ತದೆ. ತಾನಾರು ಎಂಬ ಭಾವನೆ ಕಾಡುತ್ತದೆ.

ಇದೇ ವಿಷಯವನ್ನು ಮನುಷ್ಯನನ್ನು ಉದಾರಣೆ ತೆಗೆದುಕೊಂಡು ವಿವರಿಸೋಣ. ಒಬ್ಬ ಮನುಷ್ಯನಿಗೆ ಒಂದಾದ ಮೇಲೆ ಒಂದು ಅಂಗಗಳ ವಿಫಲತೆ ಕಾಡುತ್ತದೆ ಎಂದುಕೊಳ್ಳೋಣ. ಅವನು ಕಿಡ್ನಿ, ಲಿವರ್, ಶ್ವಾಸಕೋಶ, ಹೃದಯ, ಚರ್ಮ ಹೀಗೆ ಎಲ್ಲಾ ಅಂಗಾಂಗಳನ್ನು ಕಸಿ ಮಾಡಿಸಿಕೊಳ್ಳುತ್ತಾ ಹೋಗುತ್ತಾನೆ ಎಂದುಕೊಳ್ಳೋಣ. ಕೊನೆಗೆ ಈ ವ್ಯಕ್ತಿಯನ್ನು ಹೇಗೆ ಗುರುತಿಸುತ್ತೀರಿ?. ಅವನು ಪಡೆದ ಅಂಗಾಂಗಗಳ ವ್ಯಕ್ತಿಗಳ ಹೆಸರಿನಿಂದಲೂ ಅಥವಾ ಮೂಲ ವ್ಯಕ್ತಿಯ ಹೆಸರಿನಿಂದಲೂ?.

ಈ ವಿಷಯವನ್ನು ಇಲ್ಲಿ ನೆನಪಿಸಿಕೊಳ್ಳುವುದಕ್ಕೆ ಕಾರಣ ಸೆಂಟ್ರಲ್ ಕೌನ್ಸಿಲ್ ಇಂಡಿಯನ್ ಮೆಡಿಸಿನ್ (ಸಿಸಿಐಎಂ) ಆಯುರ್ವೇದದ ಬಗ್ಗೆ ಹೊರಡಿಸಿರುವ ಗೆಜೆಟ್ ಆದೇಶ. 2020 ತಿದ್ದುಪಡಿಯ ಪ್ರಕಾರ ಎಂಎಸ್ ಆಯುರ್ವೇದ ಶಲ್ಯತಂತ್ರ (ಜನರಲ್ ಸರ್ಜರಿ) ಮತ್ತು ಎಂಎಸ್ ಆಯುರ್ವೇದ ಶಾಲಾಕ್ಯ ತಂತ್ರ (ಕಣ್ಣು, ಮೂಗು, ಗಂಟಲು ಮತ್ತು ಮತ್ತು ದಂತ ಶಾಸ್ತ್ರ) ಇದರಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರಿಗೆ ಸುಮಾರು 58 ವಿಧದ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಅಧಿಕೃತವಾಗಿ ಅನುಮತಿ ನೀಡಲಾಗಿದೆ. ಕೌನ್ಸಿಲ್‌ನವರು ಕೊಡುವ ವಿವರಣೆಯ ಪ್ರಕಾರ ಈ ಶಸ್ತ್ರಚಿಕಿತ್ಸೆಗಳು ಮೊದಲಿನಿಂದಲೂ ಆಯುರ್ವೇದ ಪದ್ಧತಿಯಲ್ಲಿ ಮಾಡಲಾಗುತ್ತಿತ್ತು. ಇದಕ್ಕೆ ಆಧುನಿಕ ವೈದ್ಯಪದ್ಧತಿಯ ಹೆಸರುಗಳನ್ನು ಅಳವಡಿಸಿಕೊಂಡು, ಸ್ಪಷ್ಟತೆಗೋಸ್ಕರ ಮರುಪ್ರಕಟಣೆ ಮಾಡಲಾಗಿದೆ ಅಷ್ಟೇ. ಇದನ್ನ ಆಧುನಿಕ ವೈದ್ಯಪದ್ಧತಿಯವರು ಒಪ್ಪಲು ಸಿದ್ಧವಿಲ್ಲ. ಕಾರಣ ಆದೇಶದಲ್ಲಿ ಆಯುರ್ವೇದಿಕ್ ವೈದ್ಯರುಗಳು ಮಾಡುವ ಸಾಮಾನ್ಯ ಶಸ್ತ್ರಚಿಕಿತ್ಸೆ ಮಾತ್ರವಲ್ಲದೆ, ಆಧುನಿಕ ವೈದ್ಯಪದ್ಧತಿಯವರು ಮಾತ್ರ ಮಾಡುವ ಪ್ಲಾಸ್ಟಿಕ್ ಸರ್ಜರಿ, ಕಣ್ಣಿನ ಶಸ್ತ್ರ ಚಿಕಿತ್ಸೆಯಂಥ ಉನ್ನತಮಟ್ಟದ ಶಸ್ತ್ರಚಿಕಿತ್ಸೆಗಳು ಕೂಡ ಸೇರಿಕೊಂಡಿರುವುದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ಆಧುನಿಕ ವೈದ್ಯಪದ್ಧತಿಯವರು ಈ ಬೆಳವಣಿಗೆಯನ್ನು ‘ಮಿಕ್ಸೋ ಪತಿ’ ಲೇವಡಿ ಮಾಡಿ ವಿರೋಧಿಸಿದ್ದಾರೆ. ಇವರ ಪ್ರಕಾರ ಈ ರೀತಿಯ ಆದೇಶದಿಂದ ಸಮಗ್ರ ವೈದ್ಯಪದ್ಧತಿ ಬೆಳವಣಿಗೆಯ ಬದಲು ‘ಕಿಚಡಿ’ ವೈದ್ಯಪದ್ಧತಿ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಇಂದೊಂದು ಸರಕಾರಿ ಪ್ರಯೋಜಿತ ‘ನಕಲಿ ವೈದ್ಯ ಪದ್ಧತಿ’ ಎನ್ನುತ್ತಿದ್ದಾರೆ. ಇವರ ಅಭಿಪ್ರಾಯಕ್ಕೆ ಹಲವಾರು ಕಾರಣಗಳನ್ನು ಕೂಡ ಕೊಡುತ್ತಿದ್ದಾರೆ.

1.ಈ ಗೆಜೆಟ್ ನೋಟಿಫಿಕೇಶನ್‌ನಲ್ಲಿ ಇರುವ ಕೆಲವೊಂದು ಶಸ್ತ್ರಚಿಕಿತ್ಸೆಗಳಿಗೆ, ಆಧುನಿಕ ವೈದ್ಯಪದ್ಧತಿಯ ಅರವಳಿಕೆ ಅವಶ್ಯಕತೆ ಇದೆ. ಆಧುನಿಕ ವೈದ್ಯಪದ್ಧತಿಯ ಅರವಳಿಕೆಯನ್ನು ಉಪಯೋಗಿಸಿಕೊಂಡು ಆಯುರ್ವೇದಿಕ್ ವಿಧಾನದಲ್ಲಿ ಶಸ್ತ್ರಚಿಕಿತ್ಸೆ ಮಾಡಿದರೆ ಇದು ಯಾವ ಪದ್ಧತಿ ಆಗುತ್ತದೆ?. ಇಂತಹ ಶಸ್ತ್ರಚಿಕಿತ್ಸೆಗಳನ್ನು ಮಾಡುವಾಗ ರೋಗಿಗೆ ಏನಾದರೂ ತೊಂದರೆಯಾದರೆ, ಅದಕ್ಕೆ ಆಯುರ್ವೇದ ಪದ್ಧತಿಯ ವೈದ್ಯರನ್ನು ಗುರಿ ಮಾಡಬೇಕೋ ಅಥವಾ ಅರವಳಿಕೆ ಪದ್ಧತಿ ವೈದ್ಯರನ್ನು ಇದಕ್ಕೆ ಜವಾಬ್ದಾರಿ ವಹಿಸಬೇಕು?

2.ಯಾವುದೇ ಶಸ್ತ್ರಚಿಕಿತ್ಸೆಯಿಂದ ರೋಗಿಗಳು ಹೊರಬರಬೇಕಾದರೆ ಆಂಟಿಬಯಾಟಿಕ್ಸ್‌ಗಳು ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಅತ್ಯಾಧುನಿಕ ಚಿಕಿತ್ಸೆಗಳನ್ನು ಮಾಡುವಾಗ ತೀಕ್ಷ್ಣವಾದ ಅಂಟಿಬಯೋಟಿಕ್ಸ್ ಅಗತ್ಯವಿರುತ್ತದೆ. ಆಗ ಆಯುರ್ವೇದ ವೈದ್ಯ ಪದ್ಧತಿಯವರು ಆಧುನಿಕ ವೈದ್ಯಪದ್ಧತಿಯ ಆಂಟಿಬಯೋಟಿಕ್ಸ್‌ಗಳನ್ನು ಉಪಯೋಗಿಸುತ್ತಾರೆಯೇ? ಹಾಗೆ ಉಪಯೋಗಿಸಲು ಅನುಮತಿ ಇದೆಯೇ?

3.ಆಯುರ್ವೇದದವರು ಮಾಡಬಹುದಾದ ಶಸ್ತ್ರಚಿಕಿತ್ಸೆಗಳ ಪಟ್ಟಿಯಲ್ಲಿ ಸಾಮಾನ್ಯ ಶಸ್ತ್ರ ಚಿಕಿತ್ಸೆಗಳು ಮಾತ್ರವಲ್ಲದೆ, ಅತ್ಯಂತ ಪರಿಣತರು ಮಾಡುವ ಉನ್ನತ ಮಟ್ಟದ ಆಪರೇಷನ್‌ಗಳೂ ಕೂಡ ಇವೆ. ಇಂತಹ ಶಸ್ತ್ರಚಿಕಿತ್ಸೆಯ ತರಬೇತಿಯನ್ನು ಆಯುರ್ವೇದ ವೈದ್ಯರುಗಳು ಎಲ್ಲಿ ಪಡೆದುಕೊಳ್ಳುತ್ತಾರೆ?

ಹಾಗೆ ನೋಡಿದರೆ ಆಯುರ್ವೇದ ವೈದ್ಯ ಪದ್ಧತಿ ಈಗ ಶುದ್ಧ ರೂಪದಲ್ಲಿ ಉಳಿದುಕೊಂಡಿಲ್ಲ, ಆಯುರ್ವೇದ ಪದವಿ ಕಲಿಕಾ ಹಂತದಲ್ಲಿಯೇ ಶರೀರಶಾಸ್ತ್ರದಂಥ ಹಲವಾರು ಆಧುನಿಕ ವೈದ್ಯ ಪದ್ಧತಿಯ ಪಠ್ಯಪುಸ್ತಕಗಳನ್ನು ಆಯುರ್ವೇದ ಪದ್ಧತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಸರಕಾರಿ ಆಸ್ಪತ್ರೆಗಳಲ್ಲಿ ಅಧಿಕೃತವಾಗಿ, ಆಯುರ್ವೇದ ವೈದ್ಯರುಗಳು ಆಧುನಿಕ ವೈದ್ಯಪದ್ಧತಿಯ ಔಷಧಗಳನ್ನು ಉಪಯೋಗಿಸುತ್ತಿದ್ದರೆ . ಅನಧಿಕೃತವಾಗಿ ಬಹಳಷ್ಟು ಆಯುರ್ವೇದ ವೈದ್ಯರುಗಳು, ಆಧುನಿಕ ವೈದ್ಯಪದ್ಧತಿಯ ಔಷಧಗಳನ್ನು ಉಪಯೋಗಿಸುತ್ತಿದ್ದಾರೆ. ಬಹಳಷ್ಟು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ, ಕಡಿಮೆ ಸಂಬಳಕ್ಕೆ ಸಿಗುತ್ತಾರೆ ಎಂಬ ಕಾರಣದಿಂದ ಆಯುರ್ವೇದಿಕ್ ವೈದ್ಯರುಗಳನ್ನು ನೇಮಿಸಿಕೊಂಡಿದ್ದಾರೆ. ಹಲವಾರು ಪ್ರತಿಷ್ಠಿತ ಆಧುನಿಕ ವೈದ್ಯ ಪದ್ಧತಿಯ ಆಸ್ಪತ್ರೆಗಳಲ್ಲಿ ಐಸಿಯು ನಡೆಸುವವರು ಆಯುರ್ವೇದಿಕ್ ವೈದ್ಯರುಗಳು ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಈ ಹಿನ್ನೆಲೆಯಲ್ಲಿ ನೋಡಿದರೆ ಆಯುರ್ವೇದಿಕ್ ವೈದ್ಯ ಪದ್ಧತಿಯನ್ನು ತನ್ನ ಮೂಲರೂಪದಲ್ಲಿ ಉಪಯೋಗಿಸುತ್ತಿರುವ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಮ್ಮೆ ಆಯುರ್ವೇದಿಕ್ ವೈದ್ಯಪದ್ಧತಿಯವರು ಆಧುನಿಕ ವೈದ್ಯಪದ್ಧತಿಯ ತರಬೇತಿ ಪಡೆದರೆ, ಆಯುರ್ವೇದ ವೈದ್ಯ ಪದ್ಧತಿಯನ್ನು ಮೂಲರೂಪದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಿಲ್ಲ.

ಇದ್ದುದರಲ್ಲಿ ಆಯುರ್ವೇದಿಕ್ ವೈದ್ಯಪದ್ಧತಿ ಮತ್ತು ಆಧುನಿಕ ವೈದ್ಯಪದ್ಧತಿಗೆ, ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ವಿಭಿನ್ನತೆ ಇತ್ತು. ಆದರೆ ಈ ಗೆಜೆಟ್ ಆದೇಶದದಿಂದ ಒಂದು ವಿಭಿನ್ನತೆಯು ಕೂಡ ಮಾಯವಾಗುವ ಲಕ್ಷಣಗಳು ಇವೆ. ಆಯುರ್ವೇದದ ಅಡ್ಡಪರಿಣಾಮಗಳಿಲ್ಲದ ಚಿಕಿತ್ಸೆ ಎನ್ನುವ ಹಣೆಪಟ್ಟಿಯೊಂದಿಗೆ ಜನರು ಗುರುತಿಸುತ್ತಾರೆ. ಆದರೆ ಈಗ ಆಯುರ್ವೇದ ವೈದ್ಯ ಪದ್ಧತಿಯವರು ಶಸ್ತ್ರಚಿಕಿತ್ಸೆಗಳನ್ನು ಅಡ್ಡಪರಿಣಾಮವಿಲ್ಲದೆ ಮಾಡಲು ಸಾಧ್ಯವಿಲ್ಲದ್ದರಿಂದ, ಆಯುರ್ವೇದದ ಅಡ್ಡಪರಿಣಾಮ ರಹಿತ ಶಸ್ತ್ರಚಿಕಿತ್ಸೆ ಎಂಬ ಹಣೆಪಟ್ಟಿ ಕಳೆದುಕೊಳ್ಳುತ್ತದೆ ಎಂಬ ಸಂಶಯ ಉಂಟಾಗಿದೆ.

ರೋಗಿಯ ದೃಷ್ಟಿ ಕೋನದಿಂದ ನೋಡುವುದಾದರೆ, ಚಿಕಿತ್ಸೆ ಯಾವ ಪದ್ಧತಿಯಿಂದಲೂ ಬಂದಾದರೂ ರೋಗಿಗೆ ತೊಂದರೆ ಇಲ್ಲ, ಒಟ್ಟಿನಲ್ಲಿ ಅವನಿಗೆ ಗುಣವಾಗಬೇಕು. ಈ ದೃಷ್ಟಿಯನ್ನು ಇಟ್ಟುಕೊಂಡು ನೋಡಿದಾಗ ‘ಸಮಗ್ರ’ ವೈದ್ಯಪದ್ಧತಿಯ ಅವಶ್ಯಕತೆ ಖಂಡಿತ ಇದೆ. ಸಮಗ್ರ ವೈದ್ಯ ಪದ್ಧತಿ ಎಂದರೆ ಎಲ್ಲಾ ವೈದ್ಯಪದ್ಧತಿಯನ್ನು ಬೆರೆಸುವುದು ಎಂದು ಅರ್ಥವಲ್ಲ. ಸಮಗ್ರ ವೈದ್ಯ ಪದ್ಧತಿಯನ್ನು ಜಾರಿಗೆ ತರಲು ಪ್ರತಿಯೊಂದು ವೈದ್ಯಪದ್ಧತಿಯಲ್ಲಿರುವ ಶಕ್ತಿ ಮತ್ತು ದೌರ್ಬಲ್ಯಗಳನ್ನು ವೈಜ್ಞಾನಿಕವಾಗಿ ಗುರುತಿಸಬೇಕು. ಪ್ರತಿಯೊಂದು ವೈದ್ಯಪದ್ಧತಿಯ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಿದ ನಂತರ , ಪ್ರತಿ ರೋಗಕ್ಕೂ ಯಾವ ಪದ್ಧತಿಯಲ್ಲಿ ಚಿಕಿತ್ಸೆ ನೀಡಿದರೆ ಬೇಗ ಗುಣವಾಗುತ್ತದೆ ಎಂಬ ಅಧ್ಯಯನ ಮಾಡಿ, ಅದರ ಪ್ರಕಾರ ಸಾಮಾನ್ಯ ನಿಯಮಾವಳಿಗಳನ್ನು ಮಾಡಬೇಕಾಗುತ್ತದೆ. ಸಮಗ್ರ ವೈದ್ಯ ಪದ್ಧತಿ ರೂಢಿಯಲ್ಲಿರುವ ಆಸ್ಪತ್ರೆಗೆ ರೋಗಿಗಳು ಬಂದಾಗ, ಅವನಿಗೆ ರೋಗಕ್ಕೆ ಅನುಗುಣವಾಗಿ , ಅವಶ್ಯ ತಜ್ಞ ವೈದ್ಯರ ಬಳಿಗೆ ಕಳುಹಿಸಿದಾಗ ಸಮಗ್ರ ವೈದ್ಯಪದ್ಧತಿಗೆ ಒಂದು ಅರ್ಥ ಬರುತ್ತದೆ. ಆಧುನಿಕ ವೈದ್ಯ ಪದ್ಧತಿಯಲ್ಲಿ ಹಲವಾರು ವಿಭಾಗಗಳು ಇರುವಂತೆ, ಆಯುರ್ವೇದ ಕೂಡ ಒಂದು ವಿಭಾಗವಾಗಿ ಮೂಲ ರೂಪದಲ್ಲಿ ಕೆಲಸಮಾಡಲು ಸಾಧ್ಯ. ಅದನ್ನು ಬಿಟ್ಟು ಒಂದು ವೈದ್ಯಪದ್ಧತಿಯ ವೈದ್ಯರನ್ನು, ಇನ್ನೊಂದು ವೈದ್ಯ ಪದ್ಧತಿಯಲ್ಲಿ ತರಬೇತಿ ಕೊಟ್ಟು ಅರೆಬೆಂದ ಹೈಬ್ರಿಡ್ ವೈದ್ಯರನ್ನು ತಯಾರು ಮಾಡುವುದು, ರೋಗಿಗಳ ಪ್ರಾಣದ ಜೊತೆ ಚಲ್ಲಾಟ ಮಾತ್ರವಲ್ಲದೆ , ವೈದ್ಯಪದ್ಧತಿಯ ಅಳಿವು-ಉಳಿವಿನ ಪ್ರಶ್ನೆ ಕಾಡುತ್ತದೆ.

ಈ ವಿಷಯ ಸದ್ಯಕ್ಕೆ ಕಾವು ಪಡೆದುಕೊಳ್ಳುತ್ತಿದೆ . ಇದು ಯಾವ ಹಂತವನ್ನು ಹೋಗಿ ಮುಟ್ಟುತ್ತದೆ ಎಂಬುದು ಸದ್ಯಕ್ಕೆ ಹೇಳುವ ಹಾಗಿಲ್ಲ. ಆಲೋಪತಿ ಎಂಬುದು ಅಡ್ಡ ಪರಿಣಾಮಗಳ ಚಿಕಿತ್ಸಾ ಪದ್ಧತಿ ಎಂದು ಅಳಿಯುತ್ತಿದ್ದ, ಆಯುರ್ವೇದ ಪದ್ಧತಿಯವರು ಈ ಗೆಜೆಟ್ ಆದೇಶವನ್ನು ಸ್ವಾಗತಿಸುವುದರ ಮೂಲಕ, ಆಧುನಿಕ ವೈದ್ಯ ಪದ್ಧತಿಯನ್ನು ಅಪ್ಪಿಕೊಂಡಿದ್ದಾರೆ. ಹಲವಾರು ವರ್ಷ ಕಷ್ಟಪಟ್ಟು ಹಲವಾರು ವರ್ಷ ತನು, ಮನ ಧನ ವ್ಯಹಿಸಿ ಕಲಿತ ವಿದ್ಯೆಯನ್ನು, ಆಯುರ್ವೇದಿಕ್ ವೈದ್ಯರಿಗೆ ತಾಂಬೂಲದಲ್ಲಿ ಒಪ್ಪಿಸುವುದಕ್ಕೆ ಆಧುನಿಕ ವೈದ್ಯರು ಕೂಡ ತಯಾರಿಲ್ಲ. ಈ ಗೆಜೆಟ್ ಆದೇಶ, ಬ್ರಿಜ್ ಕೋರ್ಸ್ ಕಲ್ಪನೆಯಂತೆ ಆಯುರ್ವೇದಿಕ್ ವೈದ್ಯರನ್ನು, ಆಧುನಿಕ ವೈದ್ಯರನ್ನಾಗಿಸುವ ಸರಕಾರಿ ಪ್ರಾಯೋಜಿತ ಕಳ್ಳಮಾರ್ಗ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಈ ರೀತಿಯ ರೂಪಾಂತರದಿಂದ, ಆಯುರ್ವೇದದ ಮೂಲ ರೂಪ ವಿರೂಪ ಗೊಳ್ಳುವುದೇ ಅಲ್ಲದೆ , ‘ಅನ್ಯ ಪದ್ಧತಿಯ ಅಲ್ಪ ವಿದ್ಯೆ, ಪೂರ್ಣ ವಿಪತ್ತು’ ತರಬಾರದು ಎನ್ನುತ್ತಿದ್ದಾರೆ. ಈಗಾದರೆ ಕುರಿ, ಕೋಳಿ ಮಾಂಸ ಕತ್ತರಿಸುವ ದಂಧೆಯವರು ಕೂಡ, ಸರ್ಜನ್‌ಗಳಾಗುವ ದಿನಗಳು ದೂರವಿಲ್ಲ.

ಕೊನೆಮಾತು: ಊಟದಲ್ಲಿ ಮುದ್ದೆ, ಚಪಾತಿ, ಅನ್ನ, ಸಾರು ರಸಂ, ಮಜ್ಜಿಗೆ, ಮೊಸರು, ಕಾಯಿಪಲ್ಯಗಳು ಮತ್ತು ಸಿಹಿತಿಂಡಿಗಳು ಇರುತ್ತವೆ. ಇವೆಲ್ಲವನ್ನು ಮೂಲರೂಪದಲ್ಲಿ ಒಂದೊಂದಾಗಿ ತಿಂದು ಆನಂದಿಸಬೇಕು ಹೊರತು, ಹೊಟ್ಟೆಯಲ್ಲಿ ಎಲ್ಲವು ಬೆರೆಯುತ್ತವೆ ಎಂಬ ವಿತಂಡ ವಾದ ಮಾಡಿ, ಎಲ್ಲವನ್ನೂ ತಟ್ಟೆಯಲ್ಲಿಯೇ ಒಟ್ಟಿಗೆ ಕಲಸಿ ತಿನ್ನುವುದರಿಂದ ಯಾವ ಸುಖವಿದೆ?